ಎಂ.ಜಿ. ರಾಮಚಂದ್ರ, ಮಂಡಗಳಲೆ

ಹೆಂಡತಿ ಅಡುಗೆಮನೆಯಲ್ಲಿ ಹಾಡುವುದು ಯಾವಾಗ ರಾಮ್?



ಗಂಡ ಅವಳ ರಾಗಕ್ಕೆ ತಕ್ಕಂತೆ ತಾಳ ಹಾಕಿದಾಗ.

ಹೆಚ್.ವಿ. ಶ್ರೀಧರ್, ಬೆಂಗಳೂರು

‘ಸತತ ವೈಫಲ್ಯ’ ಎಂಬ ಹೆಸರಿನ ಸಿನಿಮಾ ತೆಗೆಯಬೇಕೆಂದಿದ್ದೇನೆ. ಯಶಸ್ವಿಯಾಗಬಹುದೆ?

ತೆಗೆಯಿರಿ. ಚಿತ್ರ ತೋಪಾದರೆ ಹೆಸರು ಯಶಸ್ವಿ!


ಬಿ.ಆರ್. ಉಷಾ, ಬೆಂಗಳೂರು

ಮದುವೆಮನೆಯ ಊಟದಲ್ಲಿ ಒಂದು ಅಗಳೂ ಚೆಲ್ಲಬಾರದೆಂದು ರೂಲ್ಸ್ ತಂದರೆ?

‘ನಾವು ಬಿಡುತ್ತೇವಷ್ಟೆ. ಚೆಲ್ಲುವುದು ನಿಮ್ಮ ಆಳುಗಳೇ’ ಎಂದು ವಾದಿಸುತ್ತಾರೆ.

ಅನಸೂಯಾ ಟಿ., ಕೇದಿಗೆಮನೆ

ಸತ್ಯವನ್ನೇ ಹೇಳುತ್ತೇನೆ ಎಂದು ಕಟಕಟೆಯಲ್ಲಿ ಪ್ರಮಾಣ ಮಾಡುವ ಸುಳ್ಳುಸಾಕ್ಷಿಯ ಆತ್ಮಸಾಕ್ಷಿಯ ಗತಿ?



ಆತ್ಮಸಾಕ್ಷಿಯ ಶ್ರಾದ್ಧ ಮಾಡಿಯೇ ಅವನು ಕಟಕಟೆ ಹತ್ತಿರುತ್ತಾನೆ.

ಮಲ್ಲಿಕಾರ್ಜುನ, ಸುರಧೇನುಪುರ

ಸರ್ಕಾರದಲ್ಲಿ ಮಾಧ್ಯಮ ಸಲಹೆಗಾರರ ಹುದ್ದೆಯ ಅಗತ್ಯವೇನು?

ಶುದ್ಧಶುಂಠಿಗಳು ಬಾಯಿಬಿಟ್ಟು ಮಾಡಿಕೊಳ್ಳುವ ಎಡವಟ್ಟನ್ನು ತಡೆಯಲು.

ಭಾರತೀ ಗಂಗಾಧರ್, ಬೆಂಗಳೂರು

ಸ್ವರ್ಗಸುಖ ಬೇಕು. ಆದರೆ ಸ್ವರ್ಗವಾಸ ಬೇಡ ಎನ್ನುವರಲ್ಲ?

ಸರಿಯೇ. ಸುಖ ನೀಡುವ ವಸ್ತುಗಳನ್ನು ಡೋರ್ ಡೆಲಿವರಿ ಪಡೆಯುವುದೇ ಜಾಣತನ.

ದಿನೇಶ್, ಗುಡ್ಡದೂರು

ರಾಜಕೀಯ ಕಲುಷಿತ ಎನ್ನುವವರೇ ಹೆಚ್ಚಾಗಿ ರಾಜಕೀಯಕ್ಕೆ ಬರಲು ಕಾರಣ?

ಎಮ್ಮೆಗಾಗಲಿ, ಎಮ್ಮೆಲೆಗಾಗಲಿ ಕೆಸರೇ ಪ್ರಿಯ.

ಪಿ.ಎನ್. ಶ್ರೀವತ್ಸ, ಬೆಂಗಳೂರು

ಮಾನವರ ದೇಹದ ಅಂಗಾಂಗಗಳನ್ನು ಫ್ರಿಜ್‌ನಲ್ಲಿ ಇಡಬಹುದೆಂದು ಈವರೆಗೆ ತಿಳಿದಿರಲಿಲ್ಲವಲ್ಲ?

ನಿಜ. ಫ್ರೀಜರ್‌ಗಿಂತ ಶೀತಲ ಹೃದಯಗಳು ಕಾಣುತ್ತಿರುವುದು ಈಗಲೇ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಒಬ್ಬರ ಜ್ಞಾನವನ್ನು ಎರವಲು ಪಡೆಯಲು ಸಾಧ್ಯವೆ?

ಎರವಲು ಪಡೆದು ಡಾಕ್ಟರೇಟ್, ಪ್ರಶಸ್ತಿಗಳನ್ನು ಪಡೆದ ಪಡೆಯೇ ಇದೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ದುಶ್ಶಾಸನನು ಎಳೆದ ದ್ರೌಪದಿಯ ಸೀರೆಗಳು ಬನಾರಸ್‌ನವ್ವೋ, ಕಂಚಿಯವೋ?

‘ಗೋಕುಲದವು. ಕೃಷ್ಣನು ಇಂದಿಗಾಗಿ ಅಂದೇ ಕದ್ದು ಇರಿಸಿಕೊಂಡಿದ್ದ’ ಎಂದನೊಬ್ಬ ಬುರುಡೆ ಗಿರಾಕಿ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಸ್ನೇಹಿತರಿಗೂ, ಬಂಧುಗಳಿಗೂ ವ್ಯತ್ಯಾಸವೇನು?

ಕಷ್ಟ ಬಂದಾಗ ಬಂಧುಗಳು ಬಂದ್; ಬೆನ್ನೆಲುಬಾಗುವ ತರು ಸ್ನೇಹಿತರು.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ

ದಕ್ಷಿಣ ಭಾರತೀಯರು ಉತ್ತರ ಭಾರತೀಯ ಆಹಾರವನ್ನು ಇಷ್ಟ ಪಡುವುದೇಕೆ?

ಆಯುರ್ವೇದದ ಪ್ರಕಾರ ‘ನಾರ್ ತಿಂಡಿಯನ್’ ತಿನ್ನುವುದು ಆರೋಗ್ಯಕರ.

ಪಿ. ಜಯವಂತ ಪೈ, ಕುಂದಾಪುರ

ಸಾವು, ನಿಧನ, ಮರಣ, ಕೊನೆಯುಸಿರೆಳೆದರು; ಏನು ವ್ಯತ್ಯಾಸ?

ಕ್ರಮವಾಗಿ ಉಸಿರಿಲ್ಲ; ಹಣವಿಲ್ಲ; ವ್ರ(ರ) ಣದಿಂದ ಮರವಾದ; ಬಿಲ್ಲೇರಿಸಲೆಂದು ಸಾವಿನ ಸಮಯವನ್ನು ಎಳೆದರು!

## ಬಹುಮಾನಿತ ಪ್ರಶ್ನೆ

ಜಗದೀಶ ಬಿ. ಹೊಸೂರು, ಮೈಸೂರು

ಧಾರ್ಮಿಕ ಕ್ಷೇತ್ರಗಳಿಗೆ ಸಿಗುವಷ್ಟು ದೇಣಿಗೆ ಶಿಕ್ಷಣ, ಆರೋಗ್ಯ ಕೇಂದ್ರಗಳಿಗೆ ಸಿಗದೇಕೆ?

ಇವುಗಳಿಗೆ ನೀಡಿದರೆ ಅಲ್ಲಿಗಿಂತ ಹೆಚ್ಚು ಪುಣ್ಯ ಲಭ್ಯವೆಂಬ ಆರೋಗ್ಯಕರ ಶಿಕ್ಷಣ ದೊರೆತಿಲ್ಲ.

ಅಮರಯ್ಯಾ ಪತ್ರಿಮಠ, ಸುರಪುರ

ಭಗವಂತನೊಲುಮೆಗೆ ಭಕ್ತಿ ಬೇಕು. ಮಡದಿಯ ಒಲುಮೆಗೆ?

ಅವಳ ಮನವನ್ನರಿಯುವ ಯುಕ್ತಿ ಬೇಕು.

ಬಿ. ಬಸವರಾಜ್, ಹರಿಹರ

ನಾವು ಡಾ. ರಾಜ್ ಅವರನ್ನು ಅಣ್ಣಾವ್ರು ಎನ್ನುವುದಕ್ಕೂ, ರೌಡಿಗಳನ್ನು ಚೇಲಾಗಳು ಅಣ್ಣಾ ಎನ್ನುವುದಕ್ಕೂ?

ಇದು ಪ್ರೀತಿಯ ಕರೆ; ಅದು ಭೀತಿಯ ಮೊರೆ.

ಶೃತಿ ರಿಗ್ರೆಟ್ ಐಯ್ಯರ್, ಅಮೇರಿಕಾ

ಯಮರಾಜನ ನಿಜ ಭಕ್ತರು ಯಾರು ಸರ್?



ಹೈವೇಯಲ್ಲಿ ವೀಲಿಂಗ್ ಮಾಡುವವರು.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು

ಪ್ರತಿ ರಾತ್ರಿಯೂ ಹುಣ್ಣಿಮೆಯಾದರೆ?

ಹುಚ್ಚಾಸ್ಪತ್ರೆಗಳು ವರ್ಷವಿಡೀ ಹೌಸ್‌ಫುಲ್.

ಜಯಲಕ್ಷ್ಮೀ ಉಪಾಧ್ಯಾಯ, ಕಂಚಾರ್ತಿ

ಕೆಲವು ವಸ್ತುಗಳ ಬೆಲೆ 99,999 ಇರುತ್ತದೆ. ಒಂದು ರೂ ವಾಪಸ್ ಕೊಡುವುದಿಲ್ಲ. ಏಕೆ?

ನೀವು ಕೊಸರು ಕೊಡಲು ಕೊಸರಾಡುವುದಿಲ್ಲ ಎಂಬ ದೃಢ ನಂಬಿಕೆ.

ಆರ್.ಕೆ. ಹಾದಿಮನಿ, ಧಾರವಾಡ

ದಬ್ಬಣಕ್ಕೂ, ನಿಬ್ಬಣಕ್ಕೂ ವ್ಯತ್ಯಾಸವೇನು?

ಗ್ರೇಸ್ ಮಾರ್ಕ್ಸ್ ಕೊಟ್ಟು ದಬ್ಬಬೇಕಾದವರು ದಬ್‌ಬಣ; ನಿಬ್ ಬಳಸಿ ಪಾಸಾಗುವವರು ನಿಬ್ ಬಣ.

■ ರಾಮ್